

**ಇತಿಹಾಸ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾದ ವಿಜಯನಗರದಲ್ಲಿ 'ಚೆಂದುಳ್ಳಿ ಚೆಲುವೆ'ಯೊಬ್ಬಳು ಕಾಣಿಸಿಕೊಂಡಿದ್ದು ಈಗ ಹೊಸ ಸುದ್ದಿ. ಶ್ರೀಗಂಧದ ಬಣ್ಣದ ತುಪ್ಪಳದ ಮೇಲೆ ತಿಳಿ ಕಂದು ಬಣ್ಣದ ಪಕಳೆಗಳು, ಉದ್ದದ ಬಾಲ, ಮೂಗಿನ ತುದಿಯ ಚರ್ಮ ಕೂಡ ಶ್ರೀಗಂಧದ ಬಣ್ಣವಿರುವ ಇವಳು ಸುಮಾರು 6–7 ವರ್ಷದ ಸುಂದರಿ. ಇವಳೇ 'ಚಂದನ ಚಿರತೆ'. ಅತ್ಯಂತ ವಿರಳ ರೂಪಾಂತರದ ಚಿರತೆಯ ಕುರಿತ ಬರಹ ಈ ಸಂಚಿಕೆಯ 'ಸುಧಾ' ವಿಶೇಷ.**

■ **ಸಂಜಯ್ ಗುಬ್ಬಿ**

ಅಲ್ಲಿನ ನಿರಂತರ ಶಬ್ದ ಯಾವುದೋ ವಿಮಾನ ನಿಲ್ದಾಣದಲ್ಲಿ ಇರುವಂತೆ ಭಾಸವಾಗುತ್ತಿತ್ತು. ಆದರೆ ಅದು ವಿಮಾನಗಳ ಸದ್ದಾಗಿರಲಿಲ್ಲ. ನಮ್ಮ ಹಿಂದಿನ ಬೆಟ್ಟದ ಮೇಲಿದ್ದ ಗಾಳಿಯಂತ್ರಗಳ ಶಬ್ದವಾಗಿತ್ತು. ಈ ಬೆಟ್ಟಗಳ ಇಳಿಜಾರುಗಳಲ್ಲಿ ಮತ್ತು ತಪ್ಪಲುಗಳಲ್ಲಿ ಒಣ ಕುರುಚಲು ಕಾಡುಗಳು. ತಪ್ಪಲಿನಲ್ಲಿರುವ ಮರಗಳೆಲ್ಲವೂ ಕುಬ್ಜವಾಗಿದ್ದು ಅಲ್ಲಿನ ಹವಾಗುಣ, ಮಳೆಗೆ ಅನುಗುಣವಾಗಿ ತಮ್ಮ ಗಾತ್ರ ಮತ್ತು ಆಕಾರಗಳನ್ನು ಹೊಂದಿಸಿಕೊಂಡಿದ್ದವು. ಆದರೆ ಇಳಿಜಾರಿನಲ್ಲಿ, ಅದರಲ್ಲೂ ಮುಖ್ಯವಾಗಿ ಕಣಿವೆಗಳಲ್ಲಿ, ಮರಗಳ ಗಾತ್ರ ಹೆಚ್ಚಿತ್ತು. ಅಲ್ಲಿ ನೀರಿನ ಪ್ರಮಾಣ ಅಧಿಕವಾಗಿರುವುದರಿಂದ ಮರಗಳು ತಮ್ಮ ಗಾತ್ರವನ್ನು ಸ್ವಲ್ಪ ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ.

ದಕ್ಷಿಣ ಆಫ್ರಿಕಾದ ಅಕ್ವಾಬಾ ಲಾಡ್ಜ್ ಆ್ಯಂಡ್ ಪ್ರಿಡೇಟರ್ ಉದ್ಯಾನದಲ್ಲಿನ ಮಡಿಬಾ ಹೆಸರಿನ 'ಸ್ಟ್ರಾಬೆರಿ ಲೆಪರ್ಡ್'. ಈ ಚಿರತೆ ಪ್ರಭೇದವನ್ನು ರಾಜ್ಯದಲ್ಲಿ 'ಚಂದನ ಚಿರತೆ' ಎಂದು ಗುರುತಿಸಲಾಗಿದೆ.